# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ರಮೇಶ ಎಮ್ಮಿ | ಅ.ಸಾ-4 |
| ತಂದೆಯ ಹೆಸರು | : | ಮಲ್ಲಪ್ಪ | ಚಾಸಾ-8 |
| ವಯಸ್ಸು | : | 28 ವರ್ಷ | |
| ಉದ್ಯೋಗ | : | ಕೂಲಿ | |
| ವಿಳಾಸ | : | ಕೆಸರಬಾವಿ | |

ದಿಃ 25.03.2023 ರಂದು ಸಾಕ್ಷಿಯ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಅಂದಾಜು ಒಂದುವರೆ ವರ್ಷದ ಹಿಂದೆ ಪೊಲೀಸರು ನನ್ನನ್ನು ಮತ್ತು ಚಾಸಾ-9 ಇವರನ್ನು ಇಲಕಲ್ಲ ಪೊಲೀಸ ಠಾಣೆಗೆ ಕರೆಯಿಸಿದ್ದರು. 4 ನೇ ಆರೋಪಿ ರಮೇಶ ವಡ್ಡರ ಈತನು ಹಾಜರುಪಡಿಸಿದ ಒಂದು ಶರ್ಟ ಹಾಗೂ ಪ್ಯಾಂಟನ್ನು ಪೊಲೀಸರು ನನ್ನ ಸಮಕ್ಷಮ ನಿಪಿ-9 ರಂತೆ ಪಂಚನಾಮೆ ಮಾಡಿ, ಜಪ್ತಿ ಮಾಡಿಕೊಂಡರು. ಆ ಕಾಲಕ್ಕೆ ನಿಪಿ-10 ಮತ್ತು 11 ರಂತೆ ಫೋಟೊಗಳನ್ನು ತೆಗೆದರು. ನಿಪಿ-9 ರಲ್ಲಿರುವ ನನ್ನ ಸಹಿ ನಿಪಿ-9(ಎ) ದಲ್ಲಿದೆ. ಸದರಿ ಶರ್ಟು ಮತ್ತು ಪ್ಯಾಂಟನ್ನು ಈಗ ನಾನು ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತಿದ್ದು, ಅವು ಮು ಮಾಲು-1 ಮತ್ತು 2 ರಲ್ಲಿವೆ. ನನ್ನ ಜೊತೆ ಹಾಜರಿದ್ದ ಚಾಸಾ-9 ಸಹ ಕೂಡ ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾನೆ. 4 ನೇ ಆರೋಪಿ ರಮೇಶ ಈಗ ನ್ಯಾಯಾಲಯದ ಮುಂದೆ ಹಾಜರಿದ್ದು, ಅವನನ್ನು ನಾನು ನೋಡಿ ಗುರುತಿಸುತ್ತಿದ್ದೇನೆ.

## ಪಾಟೀ ಸವಾಲುಃ ಶ್ರೀ ಎ ಬಿ ಜೆ ವಕೀಲರಿಂದ ಆರೋಪಿ ಪರ

ಪೊಲೀಸರು ನಮಗೆ ಠಾಣೆಗೆ ಕರೆಸಿದ್ದರು. ಸದರಿ ಪಂಚನಾಮೆಯನ್ನು ನಮಗೆ ಓದಿ ಹೇಳಿ ಸಹಿ ಪಡೆದರು. ಪೊಲೀಸ ಸಿಬ್ಬಂದಿ ಒಬ್ಬರು ಪಂಚನಾಮೆ ಬರೆದರು. ಅ.ಸಾ-1 ಈ

ದಿನ ನ್ಯಾಯಾಲಯಕ್ಕೆ ನಮ್ಮ ಜೊತೆ ಬಂದಿರುತ್ತಾನೆ. ಪೊಲೀಸರು ನಮ್ಮ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಅನ್ನುವದು ಸುಳ್ಳು. ಅ.ಸಾ-1 ಈತನ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂತಾ ಹೇಳುವದು ಸರಿಯಲ್ಲ. ಪೊಲೀಸರು ನಮ್ಮ ಸಮಕ್ಷಮ ಪೊಲೀಸ ಠಾಣೆಯಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಅನ್ನುವದು ಸುಳ್ಳು 4 ನೇ ಆರೋಪಿ ಹಾಜರು ಮಾಡಿದ ಬಟ್ಟೆಗಳನ್ನು ಪೊಲೀಸರು ನಮ್ಮ ಸಮಕ್ಷಮ ಜಪ್ತಿ ಮಾಡಿಕೊಂಡರು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವದು ಸುಳ್ಳು.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

ಸತ್ರ ಮೊಕದ್ದಮೆ ಸಂಖ್ಯೆ. 20/2022

| | | | |
|---|---|---|---|
| ಹೆಸರು | : | ಚಂದ್ರಶೇಖರ ಸನ್ನಿ | ಅ.ಸಾ-3 |
| ತಂದೆಯ ಹೆಸರು | : | ದೊಡ್ಡಪ್ಪ | ಚಾಸಾ-7 |
| ವಯಸ್ಸು | : | 33 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಕೇಸರಬಾವಿ | |

ದಿಃ 25.03.2023 ರಂದು ಸಾಕ್ಷಿಯ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಅಂದಾಜು ಒಂದುವರೆ ವರ್ಷದ ಹಿಂದೆ ಸಂಜೆ ಪೊಲೀಸರು ದುರ್ಗಾ ದೇವಿ ಗುಡಿಯ ಹತ್ತಿರ ನನ್ನನ್ನು ಮತ್ತು ಚಾಸಾ-6 ಇವನನ್ನು ಕರೆಯಿಸಿದ್ದು, ಅಲ್ಲಿ 4 ಜನ ಆರೋಪಿತರು ಇದೇ ಗುಡಿಯ ಕಟ್ಟೆಯ ಮೇಲೆ ಕುಳಿತು ಯೋಜನೆ ಮಾಡಿದ್ದಾಗಿ ತೋರಿಸಿದರು. ಅಲ್ಲಿ ಪೊಲೀಸರು ನಮ್ಮ ಸಮಕ್ಷಮ ಪಂಚನಾಮೆ ಮಾಡಿ, 4 ಫೋಟೊಗಳನ್ನು ತೆಗೆದರು. ಸದರಿ ಪಂಚನಾಮೆ ನಿಶಾನೆ ಪಿ-4 ರಲ್ಲಿದ್ದು, ಅದರಲ್ಲಿರುವ ನನ್ನ ಸಹಿ ನಿಪಿ-4(ಎ) ದಲ್ಲಿದೆ. ಸದರಿ ಫೋಟೊಗಳು ನಿಪಿ-5 ರಿಂದ 8 ರಲ್ಲಿವೆ. ಆ ದಿವಸ ಯೋಜನೆ ರೂಪಿಸಿದ್ದಾಗಿ ನಮ್ಮ ಮುಂದೆ ಹೇಳಿದ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಹಾಜರಿದ್ದು, ಅವರು ಈ ಪ್ರಕರಣದ 1, 3 ರಿಂದ 5 ನೇ ಆರೋಪಿತರೆ ಇರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಹಾಜರಿದ್ದ ಚಾಸಾ-6 ರವರೂ ಸಹ ಸದರಿ ಪಂಚನಾಮೆಗೆ ಸಹಿ ಮಾಡಿರುತ್ತಾರೆ.

### ಪಾಟೀ ಸವಾಲುಃ ಶ್ರೀ ಎ ಬಿ ಜೆ ವಕೀಲರಿಂದ ಆರೋಪಿ ಪರ

ಪೊಲೀಸರು ನಮ್ಮನ್ನು ಪಂಚನಾಮೆಗೆ ಕರೆಸಿದ್ದರು. ಸದರಿ ದುರ್ಗಾ ದೇವಿಯ ಗುಡಿಯ ಕಟ್ಟೆಯ ಮೇಲೆ ರಾತ್ರಿ ಜನರು ಮಲಗುತ್ತಾರೆ ಅನ್ನುವದು ನನಗೆ ಗೊತ್ತಿಲ್ಲ.

ಅಲ್ಲಿ ಅಕ್ಕಪಕ್ಕದಲ್ಲಿ ನಾಯಿಗಳು ಇರುವದು ನನಗೆ ಗೊತ್ತಿಲ್ಲ. ಪೊಲೀಸ ಸಿಬ್ಬಂದಿ ಒಬ್ಬರು ಈ ಪಂಚನಾಮೆ ಬರೆದರು. ಅವರ ಹೆಸರು ನನಗೆ ಗೊತ್ತಿಲ್ಲ. ಈ ದಿವಸ ಅ.ಸಾ-1 ನ್ಯಾಯಾಲಯಕ್ಕೆ ಬಂದಿರುತ್ತಾನೆ ಅನ್ನುವದು ನಿಜ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಅನ್ನುವದು ಸುಳ್ಳು. ಮೇಲೆ ಹೇಳಿದ ಆರೋಪಿತರು ಆ ದಿವಸ ಸದರಿ ಕಟ್ಟೆಯ ಮೇಲೆ ಕುಳಿತು ಪ್ಲ್ಯಾನ್ ಮಾಡಿದ್ದಾಗಿ ಪೊಲೀಸರಿಗೆ ಹೇಳಿದರು ಅನ್ನುವ ಮಾತು ಸುಳ್ಳು ಇರುತ್ತದೆ ಅನ್ನುವದು ಸುಳ್ಳು . ಈ ಪಂಚನಾಮೆಯನ್ನು ಪೊಲೀಸ ಠಾಣೆಯಲ್ಲಿ ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಬರೆದು ಅಲ್ಲಿ ನಮ್ಮ ಸಹಿಗಳನ್ನು ಪಡೆಯಲಾಗಿದೆ ಅನ್ನುವದು ಸುಳ್ಳು.

ಮರು ವಿಚಾರಣೆ ಇಲ್ಲ
(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬಾಗಲಕೋಟೆ.

.